ಎಂಬ ಪ್ರಶ್ನೆ ಮೂಡಿದ್ದು. ಮೊದಲೇ ಹೇಳಿದ ಹಾಗೆ ಆತ ತನ್ನ ವಂಶವನ್ನು ಮುನ್ನಡೆಸುವ ಅವಕಾಶದಿಂದಲೂ ವಂಚಿತನಾಗಿದ್ದ. ಹಾಗಿರುವಾಗ ಆತನ ಬದುಕಿನ ಔಚಿತ್ಯವೇನು? ಈ ಪ್ರಶ್ನೆಯನ್ನು ನನ್ನ ಕಾಫಿ ಗುಂಪಿಗೆ ಹೊತ್ತೊಯ್ದೆ. ಕಣಜಗಳಲ್ಲಿ ಕುಟುಂಬ ವ್ಯವಸ್ಥೆಯ ಬಗ್ಗೆ ಪಿಎಚ್. ಡಿ. ಮಾಡಿದ್ದ ಡಾ. ಚಂದ್ರಶೇಖರ್ (ನಮ್ಮ ಎಲ್ಲ ಚರ್ಚೆಗಳಿಗೆ ವಿಭಿನ್ನ ರೀತಿಯ ಆಯಾಮಗಳನ್ನು ಕೊಡುತ್ತಿದ್ದ, ನನ್ನ ಬಹುಪಾಲು ಪ್ರಬಂಧಗಳಿಗೆ ವಸ್ತುವಿಷಯಗಳನ್ನು ಒದಗಿಸುತ್ತಿದ್ದ ಡಾ. ಚಂದ್ರಶೇಖರ್ ನಮ್ಮಿಂದ ದೂರವಾಗಿದ್ದಾರೆ. ಕ್ರೂರ ಕೋವಿಡ್ ಮಾರಿ ಅವರನ್ನು ನಮ್ಮಿಂದ ಕಸಿದುಕೊಂಡುಬಿಟ್ಟಿತು) ಅವರು ಕೊಟ್ಟ ಉತ್ತರ ವಿಚಿತ್ರವಾಗಿತ್ತು:

‘ನಮ್ಮ ಎಷ್ಟೋ ವರ್ತನೆಗಳು ಅರ್ಥವಿಲ್ಲದ ಹಾಗೆ ಕಾಣಲು ವಿಕಾಸವು ನಮ್ಮಲ್ಲಿ ತುಂಬಿರುವ **hard wiring**ನಿಂದ’ ಎಂದರು.

‘**hard wiring**? ಹಾಗೆಂದರೆ?’ ಕೇಳಿದೆ.

‘ನಮ್ಮ ಮಕ್ಕಳನ್ನು ಪ್ರೀತಿಸಿ ಅವರ ‘ಮಗುತನ’ದಲ್ಲಿ ಸಂತೋಷ ಕಂಡು, ಅವರ ಮೇಲೆ ಮಮಕಾರ ಹರಿಸುವ ಗುಣ ನಮ್ಮೆಲ್ಲರಲ್ಲಿ ವಿಕಾಸಗೊಂಡಿದೆ. ಅದರಿಂದಾಗಿಯೇ ನಾವು ನಮ್ಮ ನಮ್ಮ ಮಕ್ಕಳನ್ನು ಪೋಷಿಸಲು ಕಾಪಾಡಲು ಮುಂದಾಗುವುದು. ಆ ಮಮಕಾರ ಇಲ್ಲದಿದ್ದಲ್ಲಿ ನಾವ್ಯಾರೂ ನಮ್ಮ ಮಕ್ಕಳಿಗಾಗಿ ಹೆಣಗುತ್ತಿರಲಿಲ್ಲ. ಅವರಿಗಾಗಿ ನಮ್ಮ ಪ್ರಾಣವನ್ನೇ ತೆರಲು ಸಿದ್ಧವಿರುತ್ತಿರಲಿಲ್ಲ ಅಲ್ಲವೆ?’

‘ಹೌದು’ ಎಂದೆ.

‘ಈ ಗುಣ ನಮ್ಮಲ್ಲಿ ವಿಕಾಸಗೊಂಡಿರುವುದು ತಮ್ಮ ತಮ್ಮ ಮಕ್ಕಳನ್ನು ಪೋಷಿಸಲೆಂದು. ಅಲ್ಲವೆ?’

‘ಹೌದು’

‘ಆದರೆ ಈ ಗುಣ ಅಥವ ವರ್ತನೆ ನಮ್ಮ ಮಕ್ಕಳಿಗೆ ಮಾತ್ರವೇ ಮೀಸಲಾಗಿರುವುದಿಲ್ಲ. ನಮ್ಮದಲ್ಲದ ಮಗುವಿನ ನಗುವಿನಲ್ಲೂ ನಾವು ಆನಂದ ಕಾಣುತ್ತೇವೆ. ನಮ್ಮದಲ್ಲದ ಯಾವುದೋ ಮಗು ರಸ್ತೆಯಲ್ಲಿ ವಾಹನಗಳ ನಡುವೆ ಸಿಕ್ಕಿಕೊಂಡಾಗ ಪ್ರಾಣವನ್ನೂ ಒತ್ತೆಯಿಟ್ಟು ಅದನ್ನು ರಕ್ಷಿಸಲು ಮುಂದಾಗುತ್ತೇವೆ. ಕಾರಣ, ಮಗುವಿನ ನಗುವಿನಲ್ಲಿ ಆನಂದ ಕಾಣುವ, ಆ ಮಗುವಿನ ಪ್ರಾಣ ಕಾಪಾಡಲು ನಮ್ಮ ಪ್ರಾಣವನ್ನೇ ಒತ್ತೆಯಿಡಲು ಸಿದ್ಧವಾಗುವ ಗುಣ ನಮ್ಮಲ್ಲಿ **hard wiring** ಅಗಿರುತ್ತದೆ. ಹಾಗಾಗಿ ಬಹುಪಾಲು ಎಲ್ಲ ಮಕ್ಕಳಲ್ಲೂ ನಾವು ನಮ್ಮ ಮಕ್ಕಳನ್ನೇ ಕಾಣುತ್ತೇವೆ. ವಿಕಾಸ ಕೊಟ್ಟ ಬಳುವಳಿಯಾದ ಈ **hard wiring** ಅನ್ನು ಒಂದು ರೀತಿಯಲ್ಲಿ ನಮ್ಮಲ್ಲಿ ಅಡಗಿ ಕೂತಿರುವ ಜಾಡ್ಯ ಎನ್ನಬಹುದು. ಇದಕ್ಕೆ ಮತ್ತೊಂದು ಸರಳ ಉದಾಹರಣೆ ಎಂದರೆ, ‘ಮುಟ್ಟಿದರೆ ಮುನಿ’ ಗಿಡದ ಅಥವ ಬಸವನ ಹುಳುವಿನ ವರ್ತನೆ. ಮುಟ್ಟಿದರೆ ಮುನಿ ಎಲೆಗಳನ್ನು ಮುಟ್ಟಿದಾಗ ಅವು ಮುದುರಿಕೊಳ್ಳುವಂತೆ, ಬಸವನ ಹುಳು ಕೂಡ ಅದನ್ನು ಸ್ಪರ್ಶಿಸಿದಾಗ ಸುರುಳಿಯಾಗಿ ಸುತ್ತಿಕೊಳ್ಳುತ್ತದೆ. ಶತ್ರುಗಳ ದಾಳಿಯಿಂದ ತಪ್ಪಿಸಿಕೊಳ್ಳಲು ವಿಕಾಸಗೊಂಡಿರುವ ಈ ವರ್ತನೆಯೂ **hard wiring** ಆಗಿರುತ್ತದೆ ಎನ್ನಬಹುದು. ಕಾರಣ, ತನ್ನದೇ ಪ್ರಭೇದದ ಮತ್ತೊಂದು ಬಸವನ ಹುಳುವನ್ನು ಅದಕ್ಕೆ ಮುಟ್ಟಿಸಿದಾಗಲೂ ಕೂಡ ಅದು ಸುರುಳಿಯಾಗಿ ಸುತ್ತಿಕೊಳ್ಳುತ್ತದೆ.’

